# ಅಳಿದ ಮೇಲೂ ಉಳಿದ ಸಾಧಕ



**ಮುಂದೊಂದು ದಿನ ಕೊರೊನಾ ಶಾಶ್ವತವಾಗಿ ಕಣ್ಮರೆಯಾಗಬಹುದು. ಆದರೆ, ದಾನಿಶ್ ಸಿದ್ದಕಿ ಅವರ ಛಾಯಾಚಿತ್ರಗಳು ಸದಾ ಹಸಿರಾಗಿರಲಿವೆ. ಅವು ಕಳೆದುಹೋದ ಕೋವಿಡ್‌ನೊಂದಿಗೆ ಅದರ ದಾಳಿಯಿಂದ ಅಪ್ಪಚ್ಚಿಯಾದ ಮಾನವೀಯತೆಯ ಕಥೆಯನ್ನೂ ಹೇಳಲಿವೆ.**

■ ಪ್ರವೀಣ ಕುಲಕರ್ಣಿ

ಫೋಟೊಗಳು: ರಾಯಿಟರ್ಸ್




ಅದು ದೇಹವೆಲ್ಲ ಸಂಪೂರ್ಣ ಬೆತ್ತಲಾಗಿರುವ ನಾಗಾ ಬಾಬಾಗಳು ಮುಖಗವಸು ತೊಟ್ಟ ಚಿತ್ರವೇ ಆಗಿರಬಹುದು, ದೆಹಲಿಯ ಸ್ಮಶಾನದಲ್ಲಿ ನೂರಾರು ಚಿತೆಗಳು ಏಕಕಾಲಕ್ಕೆ ಹೊತ್ತಿ ಉರಿಯುತ್ತಿರುವಾಗ ಪಕ್ಕದ ಬಡಾವಣೆಗಳ ಮನೆಗಳಲ್ಲಿ ಮನುಷ್ಯರ ಸುಳಿವೇ ಇಲ್ಲದೆ ನೀರವ ಮೌನ ಆವರಿಸಿದ ನೋಟವೇ ಆಗಿರಬಹುದು, ಲಾಕ್‌ಡೌನ್ ಮುಗಿಯುವ ಕ್ಷಣಕ್ಕಾಗಿ ಸ್ಮಶಾನದ ಆವರಣದಲ್ಲೇ ಕಾದು ಕುಳಿತಿರುವ ಚಿತಾಭಸ್ಮದ ಕುಡಿಕೆಗಳ ಚಿತ್ರವೇ ಆಗಿರಬಹುದು... ಆ ಫೋಟೊಗಳ ಮೇಲೆಲ್ಲ ಢಾಳಾಗಿ ಬಿದ್ದಿರುವುದು ಅಸಾಮಾನ್ಯ ಛಾಯಾಗ್ರಾಹಕನಾಗಿದ್ದ ದಾನಿಶ್ ಸಿದ್ದಕಿ ಅವರ ಮೊಹರು.

ಜಗತ್ತಿನಿಂದಲೇ ಕೋವಿಡ್ ಮುಂದೊಂದು ದಿನ ಶಾಶ್ವತವಾಗಿ ಹೊರಟು ಹೋದರೂ ದಾನಿಶ್ ತೆಗೆದ ಚಿತ್ರಗಳು ಮಾತ್ರ ಸದಾ ಹಸಿರಾಗಿರಲಿವೆ. ಕಳೆದುಹೋದ ಕೋವಿಡ್‌ನ ಜತೆಜತೆಗೆ ಅದರ ದಾಳಿಯಿಂದ ಅಪ್ಪಚ್ಚಿಯಾದ ಮಾನವೀಯತೆಯ ಕಥೆಯನ್ನೂ ಅವು ಹೇಳಲಿವೆ. ಕಳೆದ ವರ್ಷ ಅಫ್ಘಾನಿಸ್ತಾನದ ಯುದ್ಧಭೂಮಿಯ ಸಾಕ್ಷಾತ್ ನೋಟಗಳನ್ನು ಮೊಗೆದು ಕೊಡಲು ಹೋಗಿದ್ದಾಗ ಉಗ್ರರಿಂದ ಹತ್ಯೆಗೀಡಾದ ಈ ಛಾಯಾಗ್ರಾಹಕ, ಎಂತಹ ಪ್ರತಿಭಾವಂತನೆಂದರೆ ಈಗ ಎರಡನೇ ಬಾರಿ ಪುಲಿಟ್ಜರ್ ಪ್ರಶಸ್ತಿ ಅವರನ್ನು ಹುಡುಕಿಕೊಂಡು ಬಂದಿದೆ. 38ರ ಹರೆಯದಲ್ಲಿ ಏನೆಲ್ಲ ಸಾಧನೆ ಮಾಡಿ, ಬದುಕಿಗೆ ವಿದಾಯ ಹೇಳಿದ ದಾನಿಶ್ ಅಳಿದ ಮೇಲೂ ತಮ್ಮ ಅಮರ ಚಿತ್ರಗಳಿಂದ ಉಳಿದ ಸಾಧಕ.

ದೆಹಲಿಯ ಜಾಮಿಯಾ ಮಿಲಿಯಾ ಇಸ್ಲಾಮಿಯಾದ ಎ.ಜೆ.ಕೆ. ಸಮೂಹ ಸಂವಹನ ಸಂಶೋಧನಾ ಕೇಂದ್ರದ (ಎಂಸಿಆರ್‌ಸಿ) ಫಿಲಂ ಸ್ಕೂಲ್‌ನಿಂದ ಪದವಿ ಪಡೆದ ಈ ಯುವಕ, ಮೊದಲು ಆಯ್ದುಕೊಂಡಿದ್ದು ಪತ್ರಕರ್ತನ ವೃತ್ತಿಯನ್ನು. ಸ್ವಲ್ಪೇ ಸಮಯದಲ್ಲಿ ಅದು ಬೇಸರ ತರಿಸಿದಾಗ ರಾಯಿಟರ್ಸ್ ಸುದ್ದಿ ಸಂಸ್ಥೆಯಲ್ಲಿ ಫೋಟೊ ಜರ್ನಲಿಸ್ಟ್ ಆಗಿ ಸೇರ್ಪಡೆಯಾದರು. ಅಪಾಯಕಾರಿ ಅಸೈನ್‌ಮೆಂಟ್‌ಗಳ ಹೊಣೆ ಹೊತ್ತು ಬಿಡುವಿಲ್ಲದಂತೆ ಒಂದು ಕಡೆಯಿಂದ ಮತ್ತೊಂದು ಕಡೆಗೆ ಸುತ್ತುತ್ತಿದ್ದರು.

ಮಾನವ ಸಂಘರ್ಷಗಳಿಗೆ ಸಂಬಂಧಿಸಿದಂತೆ ಎಂದಿಗೂ ಮಾಸದ ಸಾವಿರಾರು ಬಿಂಬಗಳನ್ನು ಅವರು ಸೆರೆಹಿಡಿದರು. ಅವುಗಳಲ್ಲಿ ಕಾಬೂಲ್‌ನ ಬೆಳ್ಳಿತೆರೆಗೆ ಸಂಬಂಧಿಸಿದಂತೆ ತೆಗೆದ ಸರಣಿ ಚಿತ್ರಗಳು, ಭಾರತದಲ್ಲಿ ಕೋವಿಡ್ ಲಾಕ್‌ಡೌನ್ ಸಮಯದಲ್ಲಿ ವಲಸೆ ಕಾರ್ಮಿಕರ ಪರದಾಟದ ಬಿಂಬಗಳು, ರೋಹಿಂಗ್ಯಾ ಜನಾಂಗದ ಕರುಣಾಜನಕ ಸ್ಥಿತಿಯ